# ಪ್ರಾಣಿ ಪ್ರೀತಿ

ಬ್ರಿಟನ್ನಿನಲ್ಲಿ ಇತ್ತೀಚೆಗೆ ನಡೆಸಲಾದ ಸಮೀಕ್ಷೆಯೊಂದರ ಪ್ರಕಾರ– ಬ್ರಿಟನ್ನಿನ ಅರ್ಧಕ್ಕಿಂತ ಹೆಚ್ಚುಮಂದಿ ಪ್ರಾಣಿ ಪ್ರಿಯರು. ತಮ್ಮ ಪ್ರೀತಿಯ ಸಾಕುಪ್ರಾಣಿಗಳನ್ನು ತಮ್ಮ ಹಾಸಿಗೆಯಲ್ಲಿ ಮಲಗಿಸಿಕೊಂಡು ನಿದ್ರಿಸಲು ಇಚ್ಛಿಸುತ್ತಾರಂತೆ. ಮತ್ತೆ, ಅವುಗಳೊಡನೆ ಮಲಗಿದರೆ ಮಾತ್ರ ಸೊಗಸಾದ ನಿದ್ರೆ ತೆಗೆಯಲು ಸಾಧ್ಯ ಎಂದೂ ಹೇಳಿದ್ದಾರೆ. ಇಲ್ಲಿ ಮತ್ತೊಂದು ಕುತೂಹಲದ ಸಂಗತಿ: ಅಲ್ಲಿನ ಪ್ರತಿ ಐದು ಮಂದಿಯಲ್ಲಿ ಇಬ್ಬರು ತಮ್ಮ ಸಂಗಾತಿಗಿಂತ ತಮ್ಮ ಪ್ರಿಯ ಸಾಕುಪ್ರಾಣಿಯೊಡನೆ ಹಾಸಿಗೆ ಹಂಚಿಕೊಳ್ಳಲು ಬಯಸುತ್ತಾರೆ. ಈ ಅಂಶ ಜಗತ್ತಿನಲ್ಲಿ ಜನರಿಗೆ ಸಾಕುಪ್ರಾಣಿಗಳ ಮೇಲಿರುವ ಪ್ರೀತಿಯ ನಿಷ್ಠೆಯನ್ನು ಎತ್ತಿ ತೋರುತ್ತದೆ!

ಮನುಷ್ಯರಿಗೆ ಮನುಷ್ಯರಿಗಿಂತ ತಮ್ಮ ಸಾಕುಪ್ರಾಣಿಗಳ ಮೇಲೇಕೆ ಹೆಚ್ಚು ನಿಷ್ಠೆ? ಪ್ರೀತಿ?

ಸಾಕುಪ್ರಾಣಿಗಳು ಆದಿಕಾಲದಿಂದಲೂ ಮಾನವ ಸಂಗಾತಿಗಳೇ? ಅವು ಅವರ ಬಳಿ ಏಕೆ ಬಂದು ಸೇರಿಕೊಂಡವು ಎಂಬುದು ಅಥವಾ ಅವರು ಅವುಗಳನ್ನು ಪಳಗಿಸಿ ಸಾಕಿಕೊಂಡು ಪ್ರೀತಿಸತೊಡಗಿದರು ಎಂಬುದು ಬೇರೆಯ ವಿಷಯ. ಅಂತು, ಅವು ಮಾನವರೊಡನೆ ಬಿಡಿಸಲಾಗದ ಬಂಧನದ ಬೆಸುಗೆಯನ್ನು ಬೆಸೆದುಕೊಂಡು ಬದುಕು ಸಾಗಿಸುತ್ತಾಬಂದಿವೆ. ಹಿಂದಿನಿಂದಲೂ ಮಾನವನು ಪ್ರಾಣಿಗಳನ್ನು ಅವಲೋಕಿಸುತ್ತಾ, ಗ್ರಹಿಸುತ್ತಾ ಅರ್ಥ ಮಾಡಿಕೊಂಡಿದ್ದಾನೆ. ಅವುಗಳ ಪ್ರೀತಿ, ನಂಬುಗೆ, ನಿಷ್ಠೆ ಪ್ರಶ್ನಾತೀತ ಎಂಬುದನ್ನು ಅನುಭವದಿಂದ ಕಂಡುಕೊಂಡಿದ್ದಾನೆ. ಮನುಷ್ಯನ ಪ್ರೀತಿ, ವಿಶ್ವಾಸ ಮತ್ತು ನಂಬುಗೆಗಳು ಕ್ಷಣ ಕ್ಷಣಕ್ಕೂ ಅನುಮಾನ ಪೂರಿತವಾಗಿರುತ್ತವೆ. ತಂದೆ– ತಾಯಿ, ರಕ್ತ ಸಂಬಂಧಗಳಲ್ಲೇ ಈ ಪ್ರೀತಿ ನಂಬುಗೆಗಳು ಸದಾ ಅಲ್ಲಾಡುತ್ತಿರುತ್ತವೆ. ಅಂದ ಮೇಲೆ ಇತರೆ ಮನುಷ್ಯ ಸಂಬಂಧಗಳಲ್ಲಿ ಭಿನ್ನಾಭಿಪ್ರಾಯ, ಒಡಕು ಮತ್ತು ದ್ರೋಹಗಳು –ಸಹಜ ವರ್ತನೆಗಳಂತೆ ಕೆಲಸ ಮಾಡುತ್ತಿರುತ್ತವೆ. ಇಂತಹ ಒತ್ತಡ ಮತ್ತು ಸಂಕೀರ್ಣ ಸಂಬಂಧಗಳ ನಡುವೆ ಮನುಷ್ಯ ಕ್ಷಮಿಸಿತ್ತಾ, ಒಪ್ಪಿಕೊಳ್ಳುತ್ತಾ, ಆತಂಕಪಡುತ್ತಲೇ ಸಹಜೀವನ ನಡೆಸಬೇಕಾದ ಅನಿವಾರ್ಯತೆ ಇರುತ್ತದೆ. ಆದರೆ ಸಾಕುಪ್ರಾಣಿಗಳ ವಿಷಯದಲ್ಲಿ ಈ ಬಗೆಯ ಅಪನಂಬಿಕೆ ಇರುವುದೇ ಇಲ್ಲ. ಕೋಳಿ, ಹಸು, ಮೇಕೆ, ಕುರಿಯಂಥ ಪ್ರಾಣಿಗಳು ಕೂಡ ಸ್ವಾಮಿದ್ರೋಹವನ್ನು ಮಾಡಲಾರವು. ಅಪ್ಪಿ ತಪ್ಪಿ ಬೇರೆಯವರ ಮನೆಯ ಕೊಟ್ಟಿಗೆಯನ್ನು ಪ್ರವೇಶಿಸಲಾರವು. ಈ ಮನುಷ್ಯನ ಪ್ರಾಣಿ ಪ್ರೀತಿ, ಕೋತಿ, ಮೊಸಳೆ, ಆಮೆ, ಇಲಿ, ಹಾವು ಮುಂತಾದ ಪ್ರಾಣಿಗಳನ್ನೂ ಬಿಟ್ಟಿಲ್ಲ. ಅಂಥವನ್ನು ಕೂಡ ಮನೆಯಲ್ಲಿಟ್ಟು ಸಾಕಿ ಪ್ರೀತಿಸುತ್ತಾನೆ! ಅಂದ ಮೇಲೆ ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳನ್ನು ಅವನು ಮರೆತಾನೆಯೇ? ಇತ್ತೀಚೆಗೆ ಪರಿಸರ ಪ್ರಜ್ಞೆ ಜಾಗೃತವಾದ ಮೇಲಂತು ಸೂಕ್ಷ್ಮಮತಿಗಳು ಸಕಲೆಂಟು ಜೀವರಾಶಿಗಳನ್ನು ಮಾನವನ ಸ್ಥಾನದಷ್ಟೇ ಬೆಲೆ ನೀಡಿ ಪ್ರೀತಿಸುತ್ತಾರೆ! ಗೌರವಿಸುತ್ತಾರೆ!

ಎಲ್ಲ ಸಾಕು ಪ್ರಾಣಿಗಳಿಗಿಂತಲೂ ಮಾನವನಿಗೆ ನಾಯಿ– ಬೆಕ್ಕು ಕಂಡರೆ ವಿಶೇಷ ಅಕ್ಕರೆ. ಮಕ್ಕಳಿಗಿಂತಲು ತುಸು ಹೆಚ್ಚೇ ಪ್ರೀತಿ. ಅವುಗಳನ್ನು ಮುದ್ದು ಮಾಡಿದರೆ ಅವನಿಗೆ ವಿಶೇಷ ಆನಂದದ ಅನುಭೂತಿ ಲಭ್ಯ. ಗ್ರಾಮೀಣ ಪ್ರದೇಶಗಳಲ್ಲಿ ಬೆಕ್ಕು ಮನೆಯ 'ಮುದ್ದಿನ ಸೊಕ್ಕಿನ' ಪ್ರಾಣಿಯಾದರೆ, ನಾಯಿ ಮಾನವನ ಮನೆ ಹೊಲ ತೋಟಗಳ ಸಂಗಾತಿಯಾಗಿದೆ; ಅವನ ಕಷ್ಟ ಸುಖಗಳ ಸಂಗಾತಿಯಾಗಿ ಬದುಕು ಸಾಗಿಸಿದೆ. ಈ ಪ್ರಿಯ ಸಂಗಾತಿಗಳನ್ನು ಗ್ರಾಮೀಣ ಜಗತ್ತು ಎಂದೂ ಕಟ್ಟಿಹಾಕಿ ಬೆಳೆಸಿಲ್ಲ; ಸಾಕಿಲ್ಲ. ಅವು ಪ್ರಕೃತಿಯಂತೆ ಸ್ವತಂತ್ರವಾಗಿ, ಸ್ವಚ್ಛಂದವಾಗಿ ಊರ ಬೀದಿಗಳಲ್ಲಿ, ಮನೆಯ ಪಡಸಾಲೆಗಳಲ್ಲಿ, ಊಟದ ಮನೆಯ ಆವರಣದಲ್ಲಿ ಬದುಕಿವೆ; ಈಗಲೂ ಬದುಕುತ್ತಿವೆ. ಗ್ರಾಮೀಣ ಬದುಕು ಅವುಗಳನ್ನು ಗೂಡುಗಳಲ್ಲಿ ಕೂಡಿ ಹಾಕಿ ಸಾಕಿಲ್ಲ; ವಿಶೇಷ ತಟ್ಟೆಗಳಲ್ಲಿ ಊಟ ಹಾಕುವುದಿಲ್ಲ. ಅವುಗಳನ್ನು ತಮ್ಮ ಮನೆಯ ಮಕ್ಕಳಂತೆ– ಇತರೆ ಸದಸ್ಯರಂತೆ ನೋಡಿಕೊಳ್ಳುತ್ತದೆ. ತಾವು ತಿನ್ನುವ ಆಹಾರವನ್ನು ಗ್ರಾಮೀಣರು ಸಾಕುಪ್ರಾಣಿಗಳ ಜೊತೆ ಹಂಚಿಕೊಂಡು ಉಣ್ಣುತ್ತಾರೆ. ತಮ್ಮೊಡನೆ– ಅಕ್ಕ ಅಪಕ್ಕದಲ್ಲೇ ಮಲಗಿಸಿಕೊಳ್ಳುತ್ತಾರೆ.

ಅತ್ಯಾಧುನಿಕ ಸೋಗಿನ ಜನರು ಇತ್ತೀಚೆಗೆ ನಗರ ಬದುಕಿನ ಸ್ವಚ್ಛತೆಯ ಬಗ್ಗೆ ಮಾತನಾಡುವಾಗ ಬೀದಿ ನಾಯಿಗಳು ಮಾಡುವ ಹೊಲಸನ್ನು ಕುರಿತು ವಿಶೇಷವಾಗಿ ಪ್ರಸ್ತಾಪಿಸುತ್ತಾರೆ. ಆದರೆ ತಾವು ದುಬಾರಿ ಬೆಲೆಗೆ ಕೊಂಡು ತಂದ ನಾಯಿಗಳಿಂದ ಪಾರ್ಕು, ಸ್ವಚ್ಛವಾದ ಬೀದಿಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡಿಸುತ್ತಾರೆ! ಅವರ ಕಣ್ಣಮುಂದೆ ವಿದೇಶಗಳಲ್ಲಿನ ಶುಭ್ರತೆ– ಸ್ವಚ್ಛತೆ ಆದರ್ಶವಾಗಿರುತ್ತದೆ. ಆದರೆ ಅದರಂತೆ ನಡೆದುಕೊಳ್ಳುವುದಿಲ್ಲ. ಸಾಮಾನ್ಯ ಜನರು ಬೀದಿನಾಯಿಗಳನ್ನು ಸಾಕುವುದನ್ನು ಉದಾಹರಿಸಿ ಅಂತಹವರು ಕೊಳಕರು ಅನ್ನುತ್ತಾರೆ. ನಮ್ಮ ದೇಶದ ಗ್ರಾಮೀಣ ಬದುಕಿನಂತೆ ಸಾಕುಪ್ರಾಣಿಗಳು ಸ್ವಚ್ಛಂದವಾಗೇ ವಿಹರಿಸುತ್ತಿರುತ್ತವೆ ಎಂಬುದನ್ನು ನಾವು ತಿಳಿಯಬೇಕು: ಪ್ರತಿ ದೇಶ ಸಂಸ್ಕೃತಿಯಲ್ಲೂ ಅದರದೇ ಆದ ಪ್ರಾಣಿಪ್ರಿಯ ಸಂಸ್ಕೃತಿ– ಸಹ ಜೀವನವಿರುತ್ತದೆ. ಅದನ್ನು ನಾವು ಮಾನ್ಯಮಾಡಿ ಗೌರವಿಸಬೇಕು. ನಮ್ಮ ಸಾಕು ಪ್ರಾಣಿಗಳು ನಮ್ಮ ಮಕ್ಕಳಿದ್ದಂತೆ! ಅವುಗಳ ಪ್ರೀತಿ ನಮ್ಮನ್ನು ಮುದಗೊಳಿಸುತ್ತದೆ, ಹೃದಯವನ್ನು ಸ್ವಚ್ಛಗೊಳಿಸುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ಮದುವೆ ಮಾಡಿಕೊಳ್ಳಿ; ಒಳ್ಳೆಯ ಹೆಂಡತಿ ಸಿಕ್ಕಿದರೆ ಸಂತೋಷ ಪಡುವಿರಿ, ಕೆಟ್ಟ ಹೆಂಡತಿ ಸಿಕ್ಕರೆ ತತ್ವಜ್ಞಾನಿ ಆಗುವಿರಿ.

–ಸಾಕ್ರೆಟಿಸ್

★ ಪರಭಾಷೆಯ ಮೇಲಿನ ಮೋಹವೇ ಸಂಸ್ಕೃತಿಯ ರಾಹು.

–ಮಹಾತ್ಮ ಗಾಂಧೀಜಿ

★ ಭಾಷೆ ವೈಯಕ್ತಿಕವೂ ಹೌದು, ಸಾಮಾಜಿಕವೂ ಹೌದು– ಏಕಕಾಲಕ್ಕೆ.

–ಗೋಪಾಲಕೃಷ್ಣ ಅಡಿಗ

★ ಮಾತೃಭಾಷೆಯ ಬಗ್ಗೆ ಎಚ್ಚರದಿಂದ ಇರುವ ಹಾಗೂ ಅದನ್ನು ಎಲ್ಲ ವಿಭಾಗಗಳಲ್ಲಿ ಅನುಷ್ಠಾನಗೊಳಿಸುವ ರಾಷ್ಟ್ರ ಅಥವಾ ರಾಜ್ಯ ಏಳಿಗೆ ಆಗದೇ ಇರುವ ಒಂದು ಉದಾಹರಣೆಯನ್ನೂ ನಾನು ಕೇಳಿಲ್ಲ.

–ಜಾನ್ ಮಿಲ್ಟನ್

★ ಜೀವಂತವಾದ ಯಾವ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು. ಕನ್ನಡ ಜಗತ್ತಿನ ಯಾವ ಭಾಷೆಗೂ ಕಡಿಮೆಯದಲ್ಲ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ವೇಷ ಬೇರೆ, ಭಾಷೆ ಬೇರೆ, ದೇಶವೊಂದೆ ಭಾರತ; ಒಂದೆ ತಾಯಮಕ್ಕಳೆಂದು ಘೋಷಿಸೋಣ ಸತತ.

–ಸಾ.ಶಿ.ಮರುಳಯ್ಯ

★ ಮಕ್ಕಳು ತಮ್ಮ ಪೋಷಕರನ್ನು ಪ್ರೀತಿಸುತ್ತಾ ಜೀವನ ಆರಂಭಿಸುತ್ತಾರೆ. ನಂತರ ಅವರನ್ನು 'ತೂಗಿ' ನೋಡುತ್ತಾರೆ. ಅವರನ್ನು ಕ್ಷಮಿಸುವುದು ತೀರಾ ಅಪರೂಪ.

–ಆಸ್ಕರ್ ವೈಲ್ಡ್

★ ಮಕ್ಕಳಿಗೆ ಪ್ರೀತಿ ತೋರಿಸಿ, ಅದು ಹತ್ತು ಪಟ್ಟಾಗಿ ನಿಮಗೆ ಹಿಂತಿರುಗುತ್ತದೆ.

–ಜಾನ್ ರಸ್ಕಿನ್

★ ಮಗಳನ್ನು ಹೆತ್ತು ಅಳಿಯನಿಗೆ ಕೊಟ್ಟೆ! ಮಗನನ್ನು ಹೆತ್ತು ಸೊಸೆಗೆ ಕೊಟ್ಟೆ!

–ಗಾದೆ

★ ಆಕಳಿಸುತ್ತ ಕೆಲಸ ಮಾಡುವವನ ಕೈ ಬಡತನ ತರುತ್ತದೆ; ಆದರೆ, ಆಸಕ್ತಿ ವಹಿಸಿ ಕೆಲಸ ಮಾಡುವವನ ಕೈ ಸಿರಿತನ ತರುತ್ತದೆ.

–ವಿವಿಲಿಯಾ

★ ಕೆನ್ನೆಗೆ ಹೊಡೆದರೆ ಕ್ಷಮೆ ಇದೆ; ಬೆನ್ನಿಗೆ ಹೊಡೆದರೆ ಕ್ಷಮೆ ಇದೆ; ಆದರೆ ಹೊಟ್ಟೆಗೆ ಹೊಡೆದರೆ ದೇವರೂ ಕ್ಷಮಿಸಲಾರ.

–ಗಾದೆ